1	2	3	4	5	6
6.	ಬಿಜಾಪುರ	250	295	31	39
7.	ಚಾಮರಾಜನಗರ	564	571	42	36
8.	ಚಿಕ್ಕಮಗಳೂರು	645	95	88	7
9.	ಚಿತ್ರದುರ್ಗ	768	352	79	28
10.	ದಾವಣಗೆರೆ	401	495	35	23
11.	ದಕ್ಷಿಣ ಕನ್ನಡ	1410	244	98	63
12.	ಧಾರವಾಡ	325	139	184	99
13.	ಗದಗ	233	303	31	43
14.	ಗುಲ್ಬರ್ಗಾ	1647	113	188	29
15.	ಹಾಸನ	336	112	127	30
16.	ಹಾವೇರಿ	443	126	526	12
17.	ಕೊಡಗು	126	228	35	6
18.	ಕೋಲಾರ	535	79	134	10
19.	ಕೊಪ್ಪಳ	238	36	36	8
20.	ಮಂಡ್ಯ	788	406	139	23
21.	ಮೈಸೂರು	2783	602	142	46
22.	ರಾಯಚೂರು	693	366	58	43
23.	ಶಿವಮೊಗ್ಗ	1165	405	91	18
24.	ತುಮಕೂರು	2050	99	75	39
25.	ಉಡುಪಿ	181	288	34	2
26.	ಉತ್ತರ ಕನ್ನಡ	853	103	159	18
	ಒಟ್ಟು	**21928**	**8693**	**4172**	**837**

ಬೆಂಗಳೂರು-ಮೈಸೂರು ಸೂಪರ್ ಹೈವೇ ಮತ್ತು ರಿಂಗ್ ರಸ್ತೆ ನಿರ್ಮಾಣ

174 (652) ಅಶೋಕ್ ಆರ್. (ಉತ್ತರಹಳ್ಳಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು-ಮೈಸೂರು ಸೂಪರ್ ಎಕ್ಸಪ್ರೆಸ್ ಮತ್ತು ರಿಂಗ್ ರಸ್ತೆ ಯೋಜನೆ ಯಾವ ಹಂತದಲ್ಲಿದೆ?

ಆ) ಯೋಜನೆಗೆ ರೈತರ ಎಷ್ಟು ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ?

ಇ) ವಶಪಡಿಸಿಕೊಂಡಿರುವ ರೈತರ ಜಮೀನಿಗೆ ಪರಿಹಾರ ಯಾವ ರೀತಿ ನೀಡಲಾಗಿದೆ?

ಈ) ಖುಷ್ಕಿ ಜಮೀನು ಮತ್ತು ನೀರಾವರಿ ಜಮೀನಿಗೆ ಎಕರೆ ಒಂದಕ್ಕೆ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಬೆಂಗಳೂರು-ಮೈಸೂರು ಸೂಪರ್ ಎಕ್ಸ್‌ಪ್ರೆಸ್ ಮತ್ತು ರಿಂಗ್ ರಸ್ತೆ ಯೋಜನೆಯ ಕಾಮಗಾರಿಗಳು ಇನ್ನೂ ಪ್ರಾರಂಭವಾಗಿಲ್ಲ. ಕಂಪೆನಿ ಮತ್ತು ಅವರ ಬ್ಯಾಂಕಿನ ನಡುವೆ ಆರ್ಥಿಕ ಕ್ಲೋಜರ್ ಅಂತಿಮ ಹಂತದಲ್ಲಿರುತ್ತದೆ.

ಆ) 14505 ಎಕರೆ ರೈತರ ಮತ್ತು ಖಾಸಗಿ ಒಡೆತನದ ಜಮೀನನ್ನು ವಶಪಡಿಸಿಕೊಳ್ಳಲು ಕೆ.ಐ.ಡಿ.ಬಿ. ವತಿಯಿಂದ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಇ) ಕರ್ನಾಟಕ ಸ್ವಾಮ್ಯದ ಕೆ.ಐ.ಎ.ಡಿ.ಬಿ. ಸಂಸ್ಥೆಯು ಭೂ ಸ್ವಾಧೀನ ಪ್ರಕ್ರಿಯೆಯ ಅಂತಿಮ ಅಧಿಸೂಚನೆಯನ್ನು ಹೊರಡಿಸಿದ ನಂತರ, ರೈತರ ಜಮೀನಿಗೆ ಸೂಕ್ತ ಪರಿಹಾರವನ್ನು ನಿಗದಿಪಡಿಸಿ ವಿತರಿಸಲಾಗುವುದು.

ಈ) ಭೂಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಸರ್ಕಾರದ ನಿಯಮಾವಳಿಗಳಂತೆ, ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಸಮಿತಿಯು ಭೂ ಸ್ವಾಧೀನ ಪಡಿಸಿಕೊಳ್ಳುವ ಖುಷ್ಕಿ ಮತ್ತು ನೀರಾವರಿ ಜಮೀನಿಗೆ ಸೂಕ್ತ ಬೆಲೆಯನ್ನು ನಿಗದಿಪಡಿಸುತ್ತದೆ.

ಬೆಂಗಳೂರು ದಕ್ಷಿಣ ತಾಲ್ಲೂಕ ಉತ್ತರಹಳ್ಳಿ ಹೋಬಳಿ ಮನವರ್ತೆಕಾವಲ್ ಗ್ರಾಮದಲ್ಲಿ ಅಕ್ರಮವಾಗಿ ಭೂ ಕಬಳಿಕೆ

175 (654) ಶ್ರೀ ಅಶೋಕ್ (ಉತ್ತರಹಳ್ಳಿ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ "ಮನವರ್ತೆ ಕಾವಲ್" ಗ್ರಾಮದಲ್ಲಿ ಅರಣ್ಯ ಇಲಾಖೆಗೆ ಸೇರಿದ ಸರ್ಕಾರಿ ಜಮೀನನ್ನು ಇಂಡೋ ಅಮೆರಿಕನ್ ಸಂಸ್ಥೆಯವರು ಕಬಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅಕ್ರಮವಾಗಿ ಕಬಳಿಕೆ ಮಾಡಿರುವ ಇಂಡೋ ಅಮೆರಿಕನ್ ಸಂಸ್ಥೆಯ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು?